ಅ) 1993-94ನೇ ಸಾಲಿನ ಆಯವ್ಯಯದಲ್ಲಿ 15.00 ಕೋಟಿ ರೂ.ಗಳನ್ನು ಸೂಚಿಸಲಾಗಿದೆ.
ಆ) ವಿಷಯವನ್ನು ಪರಿಶೀಲಿಸಲಾಗುತ್ತಿದೆ.

ವಿಷಯ : ಮಾಗಡಿಯಲ್ಲಿರುವ ಮುನ್ಸೀಫ್ ನ್ಯಾಯಾಲಯದ ಕಟ್ಟಡ.

Q : 1469

ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಾಗಡಿಯಲ್ಲಿರುವ ಮುನ್ಸೀಫ್ ನ್ಯಾಯಾಲಯಕ್ಕೆ ಸ್ವಂತ ಕಟ್ಟಡ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;
ಆ) ಹಾಗಿದ್ದಲ್ಲಿ ಸ್ವಂತ ಕಟ್ಟಡವನ್ನು ನಿರ್ಮಿಸಲು ಸರ್ಕಾರವು ಯೋಚಿಸಿದೆಯೇ;
ಇ) ಇದಕ್ಕಾಗಿ ಆಯವ್ಯಯದಲ್ಲಿ ಒದಗಿಸಿರುವ ಹಣವೆಷ್ಟು ;
ಈ) ಹಾಗಿದ್ದಲ್ಲಿ ಯಾವಾಗ, ಕಟ್ಟಡವನ್ನು ಪೂರ್ತಿಗೊಳಿಸಲಾಗುವುದು?

ಶ್ರೀ ಹಾರ್ನಳ್ಳಿ ರಾಮಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಅ) ಹೌದು.
ಆ) ಸರ್ಕಾರದ ಪರಿಶೀಲನೆಯಲ್ಲಿದೆ.
ಇ) ನ್ಯಾಯಾಲಯಕ್ಕೆ ಅವಶ್ಯವಿರುವ ಭೂಮಿಯನ್ನು ನ್ಯಾಯಾಂಗ ಇಲಾಖೆಗೆ ಸ್ವಾಧೀನಪಡಿಸಿಕೊಳ್ಳಲು ಪ್ರಸ್ತಾವನೆಯನ್ನು ಕಂದಾಯ ಇಲಾಖೆಗೆ ದಿನಾಂಕ 2 8-8-92ರಂದು ಕಳಿಸಿಕೊಡಲಾಗಿದೆ.
ಈ) ಜಮೀನನ್ನು ಸ್ವಾಧೀನ ಪಡೆದ ನಂತರ ಕಟ್ಟಡ ಕಟ್ಟುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ವಿಷಯ : ಚೆನ್ನಪಟ್ಟಣ ತಾಲ್ಲೂಕು ಇಗ್ಗಲೂರು ಯೋಜನೆ.

Q : 1721

ಶ್ರೀ ಸಾದತ್ ಅಲಿಖಾನ್ (ಚನ್ನಪಟ್ಟಣ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚನ್ನಪಟ್ಟಣ ತಾಲ್ಲೂಕು ಇಗ್ಗಲೂರು ಯೋಜನೆಗೆ ಇದುವರೆಗೆ ಖರ್ಚು ಮಾಡಿರುವ ಹಣ ಎಷ್ಟು?
ಆ) ಈ ಯೋಜನೆಯಡಿ ಎಷ್ಟು ಎಕರೆ ಪ್ರದೇಶವು ನೀರಾವರಿಗೆ ಒಳಪಟ್ಟಿರುತ್ತದೆ.
ಇ) ಸರ್ಕಾರದಿಂದ ಇದುವರೆವಿಗೂ ಬಿಡುಗಡೆಯಾದ ಹಣ ಎಷ್ಟು?
ಈ) ನೆರಲೂರು ಟ್ಯಾಂಕಿಗೆ ಈ ಯೋಜನೆಯಿಂದ ನೀರನ್ನು ಪೂರೈಸಲು ತೆಗೆದುಕೊಂಡ

ಕ್ರಮಗಳೇನು? ಹಾಗಿದ್ದಲ್ಲಿ , ಇದನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಜನವರಿ 1993ರ ಅಂತ್ಯದವರೆಗೆ 7.75 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದೆ.
ಆ) 1812 ಹೆಕ್ಟೇರುಗಳು.
ಇ) 7.75 ಕೋಟಿ ರೂ.ಗಳು (ಯೋಜನೆ ಕಾಮಗಾರಿಯನ್ನು ಕೈಗೊಂಡ ದಿನಾಂಕದಿಂದ 31-1-93ರವರೆಗೆ)
ಈ) ಇಗ್ಗಲೂರು ಯೋಜನೆಯಿಂದ ನೆರಲೂರು ಕೆರೆಗೆ ನೀರನ್ನು ಒದಗಿಸುವ ಪ್ರಸ್ತಾವನೆಯು ಇರುವುದಿಲ್ಲ.

Sub : Sanction of 33/11 K.V. Station at Lachyan in Indi Taluk.

Q : 1779
Sri Manohar U. Alnapur (Ballolli) : Will the Deputy Chief Minister be pleased to state?

a) Whether it is a fact that 33/11 KV station has been sanctioned at Lachyan in Indi Taluk.
b) If not, the reasons therefore.
c) Will the Government take steps to complete the said station during the year 1993-94.

Sri S. M. Krishna (Deputy Chief Minister):

a) Yes.
b) This does not arise in view of reply to part (a) of the question.
c) Every effort is being put forth to complete the work during the current year itself and commission the station by the end of March 1993.

Subject: Vacancies of Executive Engineers in Public Works Department.